ಮಂಗಲಾಚರಣ ಸಂಧಿ

ಹರಿ ಕಥಾಮೃತ ಸಾರ ಗುರುಗಳ|

ಕರುಣದಿಂದಾಪನಿತು ಹೇಳುವೆ |

ಪರಮ ಭಗವದ್ಭಕ್ತರಿದನಾದರದಿ ಕೇಳುವದು ||

ಶೀರಮಣಿಕರ ಕಮಲ ಪೂಜಿತ |

ಚಾರುಚರಣ ಸರೋಜ ಬ್ರಹ್ಮಸ |

ಮೀರವಾಣಿ ಫಣೇಂದ್ರ, ವೀಂದ್ರ, ಭವೇಂದ್ರ ಮುಖವಿನುತ |

ನೀರಜಭವಾಂಡೋದಯ ಸ್ಥಿತಿ |

ಕಾರಣನೇ ಕೈವಲ್ಯದಾಯಕ |

ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವಾ ||೧||

ಜಗದುದರನತಿ ವಿಮಲಗುಣರೂ |

ಪಗಳನಾಲೋಚನದಿ ಭಾರತ |

ನಿಗಮತತಿಗಳತಿಕ್ರಮಿಸಿ ಕ್ರಿಯಾ ವಿಶೇಷಣಗಳ |

ಬಗೆ ಬಗೆಯ ನೂತನವ ಕಾಣುತ |

ಮಿಗೆ ಹರುಷದಿಂ ಪೊಗಳಿ ಹಿಗ್ಗುವ |

ತ್ರಿಗುಣ ಮಾನಿ ಮಹಾಲಕುಮಿ ಸಂತೈಸಲನುದಿನವು ||೨||

ನಿರುಪಮಾನಂದಾತ್ಮಭವ ನಿ |

ರ್ಜರಸಭಾ ಸಂಸೇವ್ಯ ಋಜುಗಣ |

ದರಸೆ ಸತ್ತ್ವಪ್ರಚುರ ವಾಣೀ ಮುಖ ಸರೋಜೇನ ||

ಗರುಡ ಶೇಷ ಶಶಾಂಕದಳಶೇ |

www.yousigma.com

ಖರರ ಜನಕ ಜಗದ್ಗುರುವೇ ತ್ವ ||
ಚ್ಚರಣಗಳಿಗಭಿ ವಂದಿಸುವೇ ಪಾಲಿಪುದು ಸನ್ಮತಿಯ ||೩||
ಆರು ಮೂರೆರಡೊಂದು ಸಾವಿರ |
ಮೂರೆರಡು ಶತಶ್ವಾಸ ಜಪಗಳ ||
ಮೂರು ವಿಧ ಜೀವರೊಳಗಬ್ಜಕಲ್ಪ ಪರಿಯಂತ |
ತಾ ರಚಿಸಿ ಸತ್ತ್ವರಿಗೆ ಸುಖ ಸಂ |
ಸಾರ ಮಿಶ್ರರಿಗಧಮಜನರಿಗ ||
ಪಾರ ದು:ಖಗಳೀವ ಗುರು ಪವಮಾನ ಸಲುಹೆಮ್ಮ ||೪||
ಚತುರವದನನ ರಾಣಿ ಅತಿರೋ |
ಹಿತ ವಿಮಲ ವಿಜ್ಞಾನಿ ನಿಗಮ |
ಪ್ರತತಿಗಳಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ |
ನುತಿಸಿ ಬೇಡುವೆ ಜನನಿ ಲಕ್ಷ್ಮಿ |
ಪತಿಯ ಗುಣಗಳ ತುತಿಪುದಕೆಸ |
ನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನ ಸದನದಲಿ ||೫||
ಕೃತಿ ರಮಣ ಪ್ರದ್ಯುಮ್ನನಂದನೆ |
ಚತುರವಿಶಂತಿ ತತ್ತ್ವಪತಿ ದೇ |
ವತೆ ಗಳಿಗೆ ಗುರುವೆನಿಸುತಿಹ ಮಾರುತನ ನಿಜ ಪತ್ನಿ |
ಸತತ ಹರಿಯಲಿ ಗುರುಗಳಲಿ ಸ|
ದ್ರತಿಯ ಪಾಲಿಸಿ ಭಾಗವತ ಭಾ |
ರತ ಪುರಾಣ ರಹಸ್ಯ ತತ್ವಗಳರುಪು ಕರುಣದಲಿ ||೬||

ವೇದಪೀಠ ವಿರಿಂಚಿ ಭವ ಶ ।

ಕ್ರಾದಿ ಸುರ ವಿಜ್ಞಾನದಾಯಕ ।

ಮೋದ ಚಿನ್ಮಯಗಾತ್ರ ಲೋಕ ಪವಿತ್ರ ಸುಚರಿತ್ರ ।

ಛೇದ ಭೇದ ವಿಷಾದ ಕುಟಿಲಾಂ ।

ತಾದಿ ಮಧ್ಯ ವಿದೂರ ಆದ್ಯಾ ।

ನಾದಿ ಕಾರಣ ಬಾದರಾಯಣ ಪಾಹಿ ಸತ್ರಾಣ ॥೭॥

ಕ್ಷಿತಿಯೊಳಗೆ ಮಣಿಮಂತ ಮೊದಲಾ ।

ದತಿ ದುರಾತ್ಮರು ಬಂದಧಿಕ ವಿಂ ।

ಶತಿ ಕುಭಾಷ್ಯವ ರಚಿಸೆ ನಡುಮನೆಯೆಂಬ ಬ್ರಾಹ್ಮಣನ ।

ಸತಿಯ ಜಠರದೊಳವತರಿಸಿ ಬಾ ।

ರತಿ ರಮಣ ಮಧ್ವಾಭಿಧಾ ನದಿ ।

ಚತುರದಶ ಲೋಕದಲಿ ಮೆರೆದ ಪ್ರತಿಮಗೊಂದಿಸುವೆ ॥೮॥

ಪಂಚ ಭೇದಾತ್ಮಕ ಪ್ರಪಂಚಕೆ ।

ಪಂಚರೂಪಾತ್ಮಕನೆ ದೈವತ ।

ಪಂಚಮುಖ ಶಕ್ರಾದಿಗಳು ಕಿಂಕರರು ಶೀಹರಿಗೆ ॥

ಪಂಚ ವಿಂಶತಿ ತತ್ತ್ವತರತಮ ।

ಪಂಚಿಕೆಗಳನು ಪೇಳ್ದಭಾವಿ ವಿ ।

ರಂಚಿಯೆನಿಪಾನಂದ ತೀರ್ಥರ ನೆನೆವೆನನುದಿನವು ॥೯॥

ವಾಮದೇವ ವಿರಿಂಚಿತನಯ ಉ।

ಮಾ ಮನೋಹರ ಉಗ್ರ ಧೂರ್ಜಟಿ ॥

www.yousigma.com

ಸಾಮಜಾಜಿನವಸನ ಭೂಷಣ ಸುಮನಸೋತ್ತಂಸ ‖
ಕಾಮ ಹರ ಕೈಲಾಸ ಮಂದಿರ |
ಸೋಮ ಸೂರ್ಯನಲ ವಿಲೋಚನ |
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವಾ ‖೧೦‖
ಕೃತ್ತಿ ವಾಸನೆ ಹಿಂದೆ ನೀ ನಾ |
ಲ್ವತ್ತು ಕಲ್ಪಸಮೀರನಲಿ ಶಿ|
ಷ್ಯತ್ವವಹಿಸ್ಯಖಿಳಾಗಮಾರ್ಥಗಳೋದಿ ಜಲಧಿಯೊಳು |
ಹತ್ತು ಕಲ್ಪದಿ ತಪವಗೈದಾ |
ದಿತ್ಯರೊಳುಗುತ್ತಮನೆನಿಸಿ ಪುರು |
ಷೋತ್ತಮನೆ ಪರಿಯಂಕ ಪದವೈದಿದೆಯೊ ಮಹಾದೇವ ‖೧೧‖
ಪಾಕಶಾಸನ ಮುಖ್ಯ ಸಕಲದಿ |
ಪಾಕಸರಿಗಭಿನಮಿಪ ಋಷಿಗಳೆ |
ಗೇಕಚಿತ್ತದಿ ಪಿತೃಗಳಿಗೆ ಗಂಧರ್ವ ಕ್ಷಿತಿಪರಿಗೆ ‖
ಆ ಕಮಲನಾಭಾದಿ ಯತಿಗಳ |
ನೀಕಕಾನಮಿಸುವೆನು ಬಿಡದೆ ರ|
ಮಾಕಳತ್ರನ ದಾಸವರ್ಗಕೆ ನಮಿಪೆನನರವರತ ‖೧೨‖
ಪರಿಮಳವು ಸುಮನದೊಳಗನಲ |
ನರಣಿಯೊಳಿಗಿಪ್ಪಂತೆ ದಾಮೋ |
ದರನು ಬ್ರಹ್ಮಾದಿಗಳ ಮನದಲ್ಲಿ ತೋರಿ ತೋರದಲೆ ‖
ಇರುತಿಹ ಜಗನಾಥ ವಿಠಲನ |

ಕರುಣ ಪಡೆವ ಮುಮುಕ್ಷುಜೀವರು ।

ಪರಮ ಭಾಗವತರನು ಕೊಂಡಾಡುವುದು ಪ್ರತಿದಿನವು ॥೧೩॥

॥ ಇತಿ ಶೀ ಮಂಗಲಾಚರಣ ಸಂಧಿ ಸಂಪೂರ್ಣಂ ॥

॥ ಶೀ ಕೃಷ್ಣರ್ಪಣಮಸ್ತು ॥

www.yousigma.com